SC 6/2024
PW.18

**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,**
**ಉಡುಪಿ ಜಿಲ್ಲೆ , ಉಡುಪಿ.**

**ಸೆಷನ್ಸ್ ಕೇಸ್ ನಂಃ 6/2024** **ಫ್ರಾ.ಸಾ.18**
**ಚಾ.ಸಾ.88**

| | | |
|---|---|---|
| ಸಾಕ್ಷಿದಾರರ ಹೆಸರು | - | ಯಾಸಿನ್ |
| ತಂದೆಯ ಹೆಸರು | - | ಉಸ್ಮಾನ್ ಸಾಹೇಬ್ |
| ವಯಸ್ಸು | - | 34 ವರ್ಷ |
| ಉದ್ಯೋಗ | - | ವಕೀಲರು |
| ವಿಳಾಸ | - | ಹೂಡೆ. |

ದಿನಾಂಕಃ 08.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದಃ**

ದಿನಾಂಕ 12-11-2023 ರಂದು ನೇಜಾರಿನ ತೃಪ್ತಿ ಲೇಔಟ್ ನಲ್ಲಿ ನೂರ್ ಮಹಮ್ಮದ್ ಅವರ ಮನೆಯಲ್ಲಿ 4 ಜನರ ಕೊಲೆಯಾಗಿದ್ದು, ಘಟನೆಯ ಬಗ್ಗೆ ತಿಳಿದು ಮಧ್ಯಾಹ್ನ 3-30 ರ ಸಮಯದಲ್ಲಿ ನಾನು ಮತ್ತು ಸಹೋದರರು ಆ ಮನೆಗೆ ಭೇಟಿ ಕೊಟ್ಟಿರುತ್ತೇವೆ. ಪೋಲಿಸ್ ಅಧಿಕಾರಿ ಈರಣ್ಣರವರು ಐನಾಜ್ ರವರ ಶವ ಪಂಚನಾಮೆಗೆ ಸಾಕ್ಷಿಯಾಗಿ ಸಹಕರಿಸಲು ನನಗೆ, ಚಾಸಾ.87 ಮತ್ತು ಚಾಸಾ.89 ರವರನ್ನು ಕೇಳಿಕೊಂಡಿರುತ್ತಾರೆ. ನಾವು ಒಪ್ಪಿದ ಕಾರಣ ಪೋಲಿಸರು ನಮಗೆ ನೋಟಿಸ್ ಕೊಟ್ಟಿರುತ್ತಾರೆ. ಸದ್ರಿ ನೋಟೀಸಿಗೆ ನಾನು ಮತ್ತು ಚಾಸಾ.87 ಮತ್ತು 89 ಸಹಿಗಳನ್ನು ಮಾಡಿದ್ದೇವೆ. ಸಾಕ್ಷಿ ತನ್ನ ಸಹಿ ಗುರುತಿಸಿದ್ದು, ನೋಟೀಸನ್ನು ನಿಪಿ-78 ಎಂದು, ಸಾಕ್ಷಿಯ ಸಹಿಯನ್ನು ನಿಪಿ-78(ಎ) ಎಂದು ಗುರುತಿಸಲಾಯಿತು.

2. ಪೋಲಿಸರು ನಮ್ಮನ್ನು ಮನೆಯ ಒಳಗೆ ವಾಶ್ ರೂಮಿನ ಪ್ಯಾಸೇಜ್ ನಲ್ಲಿ ಬಿದ್ದಿದ್ದ ಐನಾಜ್ ಶವದ ಬಳಿ ಕರೆದುಕೊಂಡು ಹೋದರು. ಶವವನ್ನು ನೋಡಿದಾಗ ಆಕೆಯ ದೇಹದ ಮೇಲೆ 22 ಗಾಯಗಳು ಕಂಡುಬಂದವು. ಅವುಗಳು ಹರಿತವಾದ ಆಯುಧದಿಂದ ಮಾಡಿರುವುದು ಕಂಡುಬಂತು. ದೇಹವನ್ನು ನೋಡಿ ಆಕೆಯ ಕೊಲೆಯಾಗಿದೆ ಎಂದು ಅನಿಸಿತು. ದೇಹದ ಮೇಲೆ ಒಂದು ನೈಟಿ, ಒಳ ಚಡ್ಡಿ ಇತ್ತು. ಮನೆಯ ಒಳಗೆ ಹೋಗುವಾಗ ಹಾಲ್ ನಲ್ಲಿ ಆಸೀಮ್ ನ ಶವ, ಡೈನಿಂಗ್ ಹಾಲ್ ನಲ್ಲಿ ಹಸೀನಾರವರ ಶವ ಮತ್ತು ಮಲಗುವ ಕೋಣೆಯಲ್ಲಿ ಅಫನಾನ್ ನ ಶವ ಇದ್ದವು. ಅವುಗಳನ್ನು ನೋಡಿದಾಗ ಅವರ ಕೊಲೆಯಾಗಿದೆ ಅನಿಸಿತು. ಪೋಲಿಸರು ಐನಾಜ್ ಶವವನ್ನು ಪರಿಶೀಲಿಸಿ ಶವ ಪಂಚನಾಮೆ ತಯಾರಿಸಿ ನನ್ನ ಮತ್ತು ಚಾಸಾ.87 ಮತ್ತು 89 ರವರ ಸಹಿಗಳನ್ನು ಪಡೆದುಕೊಂಡಿದ್ದಾರೆ. ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಶವ ಪಂಚನಾಮೆಯನ್ನು ನಿಪಿ-79 ಎಂದು, ಸಾಕ್ಷಿಯ ಸಹಿಯನ್ನು ನಿಪಿ-79(ಎ) ಎಂದು ಗುರುತಿಸಲಾಯಿತು. ಶವ ಪಂಚನಾಮೆಯ ಸಮಯದಲ್ಲಿ ಭಾವ ಚಿತ್ರಗಳನ್ನು ತೆಗೆದಿದ್ದಾರೆ. ಸಾಕ್ಷಿ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು, ಅವುಗಳಲ್ಲಿ ಒಂದು ಭಾವಚಿತ್ರವನ್ನು ಈಗಾಗಲೇ ನಿಪಿ-39 ಎಂದು ಗುರುತಿಸಿದ್ದು, ಸದ್ರಿ ಭಾವಚಿತ್ರದಲ್ಲಿ ನಾನು ಹಾಗೂ ಸಹ ಪಂಚರು ಕಂಡು ಬರುತ್ತೇವೆ ಎಂದು ನುಡಿಯುತ್ತಾರೆ. ಉಳಿದ ಎರಡು ಭಾವ ಚಿತ್ರಗಳನ್ನು ನಿಪಿ-80 ಮತ್ತು 81 ಎಂದು ಗುರುತಿಸಲಾಯಿತು.

3. ಐನಾಜ್ ಳ ದೇಹದ ಮೇಲಿದ್ದ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ. ತೆರೆದ ನ್ಯಾಯಾಲಯದಲ್ಲಿ ಪ್ಯಾಕ್ ಮಾಡಿ ಸೀಲು ಮಾಡಲಾಗಿದ್ದ ಎರಡು ಪ್ಯಾಕ್ ಗಳನ್ನು ತೆರೆದು

ತೋರಿಸಲಾಗಿ, ಸಾಕ್ಷಿ ನೈಟಿ ಮತ್ತು ಒಳ ಚಡ್ಡಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮುದ್ದೆಮಾಲು-23 ಮತ್ತು 24 ಎಂದು ಗುರುತಿಸಲಾಯಿತು. ಶವ ಪಂಚನಾಮೆಯ ಸಮಯದಲ್ಲಿ ಮೃತರ ಸಂಬಂಧಿಕರಾದ ಚಾಸಾ.43 ಹಾಗೂ ಇನ್ನೊಬ್ಬ ಖಾದರ್ ಸಾಹೇಬ್ ಇದ್ದರು. ಶವ ಪಂಚನಾಮೆಯ ನಂತರ ಮೃತ ದೇಹವನ್ನು ಬೋರಮ್ಮ ಮಹಿಳಾ ಪೋಲಿಸ್ ಸಿಬ್ಬಂದಿಯೊಂದಿಗೆ ಶವ ಪರೀಕ್ಷೆಗಾಗಿ ಕಳುಹಿಸಿಕೊಟ್ಟಿರುತ್ತಾರೆ.

**<u>ಪಾಟಿ ಸವಾಲುಃ ಆರೋಪಿ ಪರ ಶ್ರೀ ಆರ್.ಪಿ.(LADC) ವಕೀಲರಿಂದ:</u>**

ಉಡುಪಿಯ ಮೂಲಕ ನಮ್ಮ ಮನೆಗೆ ಹೋಗಬೇಕಾದರೆ ಕೆಮ್ಮಣ್ಣು ಎಂಬ ಸ್ಥಳದ ನಂತರ ಹೂಡೆ ಬರುತ್ತದೆ. ಕೆಮ್ಮಣ್ಣಿನಿಂದ ಹೂಡೆಗೆ ಸುಮಾರು 1½ ರಿಂದ 2 ಕಿ.ಮೀ. ಆಗುತ್ತದೆ. ಹೂಡೆಯಿಂದ ನೇಜಾರಿಗೆ 3 ರಿಂದ 4 ಕಿ.ಮೀ. ಆಗುತ್ತದೆ. ಹೂಡೆಯಿಂದ ನೇಜಾರಿಗೆ 7-8 ಕಿ.ಮೀ. ಆಗುತ್ತದೆ ಎಂದರೆ ಸರಿಯಲ್ಲ. ಘಟನೆಯ ಬಗ್ಗೆ ಪ್ರಥಮವಾಗಿ ನನಗೆ ಮಧ್ಯಾಹ್ನ 3 ಗಂಟೆಗೆ ತಿಳಿಯಿತು. ಆಗ ನಾನು ಹೂಡೆಯಲ್ಲಿದ್ದೆ. ಘಟನಾ ಸ್ಥಳಕ್ಕೆ ತಲುಪಿದಾಗ ಮಧ್ಯಾಹ್ನ 3-30 ಆಗಿತ್ತು. ಆ ಸಮಯದಲ್ಲಿ ಸ್ವಲ್ಪ ಜನ ಸಾರ್ವಜನಿಕರು ಸ್ಥಳದಲ್ಲಿ ಸೇರಿದ್ದರು. ಘಟನೆ ನಡೆದ ಮನೆಯ ಒಳಗೆ ಪೋಲಿಸರು ಇದ್ದರು. ಒಂದೊಂದು ಶವದ ಹತ್ತಿರ ಮಹಜರು ಸಮಯದಲ್ಲಿ 3-4 ಪೋಲಿಸರು ಇದ್ದರು. ನನಗೆ ನೋಟೀಸನ್ನು ಪೋಲಿಸ್ ಅಧಿಕಾರಿ ಈರಣ್ಣ ಕೊಟ್ಟಿರುತ್ತಾರೆ.

2. ಐನಾಜ್ ಮೃತಪಡುವ ಪೂರ್ವದಲ್ಲಿ ಆಕೆಯ ಪರಿಚಯ ನನಗೆ ಇರಲಿಲ್ಲ. ಶವ ಪಂಚನಾಮೆಯ ಸಮಯದಲ್ಲಿ ನಾವು 5 ಜನ ಮತ್ತು 3 ಜನ ಪೋಲಿಸರು ಸೇರಿ ಒಟ್ಟು 8 ಜನ ಇದ್ದೆವು. ಐನಾಜ್ ಶವವನ್ನು ನಾನು ಗುರುತಿಸಿಲ್ಲ. ಪೋಲೀಸರು ಸ್ಥಳದಲ್ಲಿ ಶವವನ್ನು ಪರಿಶೀಲಿಸಿ ಶವ ಪಂಚನಾಮೆ ತಯಾರಿಸಿದ್ದಾರೆ, ಅದಕ್ಕೆ ನಾವು ಮಾಹಿತಿ ಕೊಟ್ಟಿಲ್ಲ. ಶವ ಪಂಚನಾಮೆಯ

ಸಮಯದಲ್ಲಿ ಚಾಸಾ-1, 2 ಮತ್ತು 6 ಇರಲಿಲ್ಲ. ಶವದ ಮೇಲಿದ್ದ ಬಟ್ಟೆಗಳನ್ನು ಸಂಪೂರ್ಣ ತೆಗೆದು ಗಾಯಗಳನ್ನು ಪರಿಶೀಲಿಸಿಲ್ಲ, ಆದರೆ ಬಟ್ಟೆ ಸರಿಸಿ ಗಾಯಗಳನ್ನು ಪರಿಶೀಲನೆ ಮಾಡಿದ್ದಾರೆ. ಬಟ್ಟೆಗಳನ್ನು ಸಂಪೂರ್ಣ ತೆಗೆದು ಗಾಯಗಳನ್ನು ಪರಿಶೀಲನೆ ಮಾಡದೇ ಇರುವ ಕಾರಣಕ್ಕೆ ಗಾಯಗಳ ಸ್ವರೂಪ ಮತ್ತು ಅವುಗಳು ಯಾವ ರೀತಿ ಆಗಿವೆ ಎಂದು ಹೇಳಲು ಆಗುವುದಿಲ್ಲ ಎಂದರೆ ಸರಿಯಲ್ಲ. ದೇಹದ ಮೇಲೆ 22 ಗಾಯಗಳು ಕಂಡುಬಂದವು ಮತ್ತು ಅವುಗಳನ್ನು ಹರಿತವಾದ ಆಯುಧದಿಂದ ಮಾಡಿರುವ ಬಗ್ಗೆ ಕಂಡುಬಂದಿದ್ದು ಮತ್ತು ಆಕೆಯ ಕೊಲೆಯಾಗಿದೆ ಅಭಿಪ್ರಾಯ ಪಡುವಂತಹಾ ಅವಕಾಶ ಅಲ್ಲಿ  ಇರಲಿಲ್ಲ ಎಂದರೆ ಸರಿಯಲ್ಲ. ದೇಹದ ಮೇಲೆ 22 ಗಾಯಗಳು ಇದ್ದು ಅವುಗಳನ್ನು ಹರಿತವಾದ ಆಯುಧದಿಂದ ಮಾಡಿರುವುದು ಕಂಡುಬಂತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶವ ಪಂಚನಾಮೆಯ ಸಮಯದಲ್ಲಿ ಬೇರೆ ಯಾವ ಅಧಿಕಾರಿಗಳು ಮತ್ತು ವ್ಯಕ್ತಿಗಳು ಸ್ಥಳದಲ್ಲಿ ಇದ್ದರು ಗಮನಿಸಿಲ್ಲ.

3. ಮನೆಯ ಹಿಂಬಾಗಿಲು ತೆಗೆದಿತ್ತೋ ಅಥವಾ ಮುಚ್ಚಿತ್ತೋ ಗಮನಿಸಿಲ್ಲ. ಶವ ಪಂಚನಾಮೆಗೆ ಸಂಬಂದಪಟ್ಟಂತೆ ಪೋಲಿಸರು ಸಾಕ್ಷಿದಾರರ ಹೇಳಿಕೆಯನ್ನು ನಮ್ಮ ಸಮಕ್ಷಮ ಪಡೆದುಕೊಂಡಿದ್ದಾರೆ. ಸ್ಥಳದಲ್ಲಿ ವೈಜ್ಞಾನಿಕ ಅಧಿಕಾರಿಗಳು ಇದ್ದರು. ಎಷ್ಟು ಜನ ವೈಜ್ಞಾನಿಕ ಅಧಿಕಾರಿಗಳು ಇದ್ದರು ಹೇಳಲು ಆಗುವುದಿಲ್ಲ. ಶವ ಪಂಚನಾಮೆ ಮುಗಿದ ನಂತರವೂ ವೈಜ್ಞಾನಿಕ ಅಧಿಕಾರಿಗಳು ಸ್ಥಳದಲ್ಲಿ ಇದ್ದರು. ವೈಜ್ಞಾನಿಕ ಅಧಿಕಾರಿಗಳು ಏನಾದರೂ ಸಾಕ್ಷ್ಯವನ್ನು ಸಂಗ್ರಹಿಸಿದ ಬಗ್ಗೆ ನಾನು ಗಮನಿಸಿಲ್ಲ. ಘಟನೆ ಬೆಳಿಗ್ಗೆ 9 ರ ಒಳಗೆ ನಡೆದಿದೆ ಎಂದು ಕಂಡುಬಂದಿದೆ. ನನ್ನ ಸಮಕ್ಷಮ ನಿಪಿ-79 ರಂತೆ ಯಾವುದೇ ಶವ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-79 ಕ್ಕೆ ನಾನು ಮಲ್ಪೆ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮದಲ್ಲಿ ಯಾವುದೇ ಮುದ್ದೆಮಾಲುಗಳನ್ನು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಮುದ್ದೆಮಾಲು-23 ಮತ್ತು

24 ನ್ನು ಈ ದಿನವೇ ಪ್ರಥಮ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಭಾವಚಿತ್ರಗಳನ್ನು ಛಾಯಾ ಚಿತ್ರಗಾರರು ಕ್ಯಾಮರಾದಿಂದ ತೆಗೆದಿರುತ್ತಾರೆ. ನಿಪಿ-39, 80 ಮತ್ತು 81 ನೈಜ ಭಾವಚಿತ್ರಗಳು ಅಲ್ಲ ಎಂದರೆ ಸರಿಯಲ್ಲ. ಮೃತರ ಕುಟುಂಬದವರಿಗೆ ಸಹಾಯ ಮಾಡುವ ಉದ್ದೇಶದಿಂದ ಪೋಲಿಸರು ತಿಳಿಸಿದಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.